ಓಃಎಸ್ಃನಂ.182/2019

ಪಿ.ಡಬ್ಲ್ಯೂ- 1

<u>ದಿಃ 15-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಎ ವಕೀಲರಿಂದ</u>

ದಾವ ಹಾಕಿರುವ ಸ್ವತ್ತಿನ ಸರ್ವೆ ನಂ.112. ಸದರಿ ಜಮೀನು 2 ಎಕರೆ 18 ½ ಗುಂಟೆ ಇದ್ದು ಸದರಿ ಜಮೀನಿನಲ್ಲಿ 5 ಗುಂಟೆ ಖರಾಬು ಇದೆ. ದಾವ ಆಸ್ತಿ ಮೂಲತಃ ನಮಗೆ ಸೇರಿದ ಸ್ವತ್ತು ಆಗಿರುತ್ತದೆ. ದಾವ ಆಸ್ತಿ ನಮಗೆ ಯಾವುದರ ಮುಖಾಂತರ ಬಂದಿದೆ ಎಂದು ತೋರಿಸಲು ನಮ್ಮ ಬಳಿ ಮೂಲ ಪತ್ರ ಇದೆ. ಸದರಿ ಮೂಲ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವ ಆಸ್ತಿಯನ್ನು ನಾನು ಅಳತೆ ಮಾಡಿಸಿರುತ್ತೇನೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವ ಷೆಡ್ಯೂಲ್ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ನಾನು ಬಾಯಿ ಮಾತಿನ ಮುಖಾಂತರ ಪ್ರತಿವಾದಿಯು ಕುಲುಮೆ ಹಾಕಲು ಸುಮಾರು 25 ವರ್ಷಗಳ ಹಿಂದೆ ಬಿಟ್ಟು ಕೊಟ್ಟಿರುತ್ತೇನೆ. 20 ಅಡಿ ಇಂಟು 20 ಅಡಿ ಜಮೀನನ್ನು ನೀಡಿರುತ್ತೇನೆ. ಪ್ರತಿವಾದಿಯು ಹಣವನ್ನು ಕೊಡದ ಕಾರಣ ಅದೇ ದಿನ ಕುಲುಮೆಯನ್ನು ಕೆಡವಿ ಹಾಕಿರುತ್ತೇನೆ. ದಾವ ಆಸ್ತಿಗಳು ಪ್ರಸ್ತುತ ನನ್ನ ಸ್ವಾಧೀನದಲ್ಲಿವೆ. ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ.

ದಾವ ಷೆಡ್ಯೂಲ್ ಬಿ ಮತ್ತು ಸಿ ಸ್ವತ್ತು ನನಗೆ ಸೇರಿದ ಸ್ವತ್ತುಗಳು ಅಲ್ಲ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಬಿ ಮತ್ತು ಸಿ ಸ್ವತ್ತುಗಳು ಎ ಷೆಡ್ಯೂಲ್ ಸ್ವತ್ತಿನ ಒಳಗೆ ಬರುವುದಿಲ್ಲ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಬಿ ಮತ್ತು ಸಿ ಸ್ವತ್ತುಗಳು ಸುಮಾರು 40 ವರ್ಷಗಳಿಂದ ಪ್ರತಿವಾದಿಗಳ ಸ್ವಾಧೀನದಲ್ಲಿವೆ ಎಂದರೆ ಸರಿಯಲ್ಲ. ನಾನು ದಾವ ಬಿ ಷೆಡ್ಯೂಲ್ ಸ್ವತ್ತನ್ನು 15 ವರ್ಷಗಳ ಹಿಂದೆ ನಾನು ಪ್ರತಿವಾದಿಗೆ ಬಾಯಿ ಮಾತಿನ ಮುಖಾಂತರ ಬಾಡಿಗೆಗೆ ಕೊಟ್ಟಿರುತ್ತೇನೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 2015ನೇ ಸಾಲಿನಲ್ಲಿ ಪ್ರತಿವಾದಿಯು ದಾವ ಷೆಡ್ಯೂಲ್ ಸಿ ಸ್ವತ್ತಿನ ಸ್ವರೂಪವನ್ನು ಹಾಳು ಮಾಡದಿದ್ದರೂ ಸಹ ನಾವು ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ದಾವ ಬಿ ಷೆಡ್ಯೂಲ್ ಸ್ವತ್ತು ಪ್ರತಿವಾದಿಯ ಸ್ವಾಧೀನಾನುಭವದಲ್ಲಿದ್ದು ಮತ್ತು ಅವರ ಹೆಸರಿನಲ್ಲಿ ಖಾತೆ ಸಹ ಇದೆ ಎಂದರೆ ಸರಿ. ದಾವ ಷೆಡ್ಯೂಲ್ ಸಿ ಸ್ವತ್ತಿನಲ್ಲಿ ಪ್ರತಿವಾದಿಯು ದೀರ್ಘಾವದಿ ಕಾಲದಿಂದಲೂ ವಾಸವಾಗಿದ್ದ ಕಾರಣ ಪಂಚಾಯಿತಿಯವರು ಪ್ರತಿವಾದಿಯ ಹೆಸರಿಗೆ ಸದರಿ ಸ್ವತ್ತನ್ನು ಮಂಜೂರು ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಸ್ವತ್ತು

ಗ್ರಾಮಪಂಚಾಯಿತಿಯಲ್ಲಿ ಠರಾವು ಆಗಿದೆ ಎಂದರೆ ಸರಿಯಲ್ಲ. ಆ ಕಾರಣ ದಾವ ಷೆಡ್ಯೂಲ್ ಸಿ ಸ್ವತ್ತು ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಬಿ ಮತ್ತು ಸಿ ಸ್ವತ್ತುಗಳು ಹಲಸೂರಿನ ಸರ್ವೆ ನಂ.*111* ರ ಗ್ರಾಮಠಾಣಾಕ್ಕೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಬಿ ಮತ್ತು ಸಿ ಸ್ವತ್ತುಗಳಿಗೆ ಪ್ರತಿವಾದಿಯು ಕಂದಾಯವನ್ನು ಪಾವತಿ ಮಾಡುತ್ತಾ ಬಂದಿದ್ದು ಮತ್ತು ಪ್ರತಿವಾದಿಯ ಸದರಿ ಸ್ವತ್ತುಗಳಲ್ಲಿ ಪ್ರತಿವಾದಿಯೇ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ಸದರಿ ವಿಚಾರದ ಬಗ್ಗೆ ಹಾಗೂ ದಾಖಲಾತಿಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ ಎಂದರೆ ಸರಿಯಲ್ಲ. ದಾವ ಷೆಡ್ಯೂಲ್ ಬಿ ಮತ್ತು ಸಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಅಸಸ್ ಮೆಂಟ್ ನಂಬರ್ ಗಳನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***